ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

22

ಇಲಾಖೆ / ವಿಷಯ : DEPARTMENT / SUBJECT: ಗೃಹ - ಡ್ರಗ್ಸ್ ಮಾಫಿಯಾ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ ದಿನಾಂಕ : DATE : 10/9/2020

**6 ತಿಂಗಳ ಹಿಂದೆಯೇ ಪೆಡ್ಲರ್‌ಗಳಿಗೆ ಸಿಕ್ಕಿತ್ತು ಪೊಲೀಸ್ ದಾಳಿ ಸುಳಿವು**

# 12 ಜನರ ಸಿಂಡಿಕೇಟ್ ಮಾಡಿಕೊಂಡಿದ್ದ ರಾಗಿಣಿ

ವಿ.ವಾ - 10-9-20



ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸ್ಯಾಂಡಲ್‌ವುಡ್‌ಗೆ ಡ್ರಗ್ಸ್ ಪೂರೈಕೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಪೆಡ್ಲರ್‌ಗಳಿಗೆ ಸಿಸಿಬಿ ಪೊಲೀಸರು ಬಲೆಬೀಸಿರುವ ಸುಳಿವು 6 ತಿಂಗಳ ಹಿಂದೆಯೇ ಲಭ್ಯವಾಗಿತ್ತು ಎನ್ನಲಾಗಿದೆ. ಪೊಲೀಸರು ಬೆನ್ನತ್ತಿರುವ ವಿಚಾರ ಗೊತ್ತಾಗಿ ವಾಟ್ಸ್‌ಆ್ಯಪ್‌ನಲ್ಲಿ ಕೋಡ್‌ವರ್ಡ್‌ಗಳಲ್ಲಿ ಮಾತುಕತೆ ನಡೆಸಿರುವ ಹಾಗೂ ರಾಗಿಣಿ ದ್ವಿವೇದಿ 12 ಜನರ ಸಿಂಡಿಕೇಟ್ ರೂಪಿಸಿಕೊಂಡಿದ್ದ ವಿಚಾರ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪಬ್, ಪಂಚತಾರಾ ಹೋಟೆಲ್, ಫಾರ್ಮ್ ಹೌಸ್‌ಗಳಲ್ಲಿ ರೇವ್ ಪಾರ್ಟಿಗಳನ್ನು ಆಯೋಜಿಸಿ, ಪಂಜಾಬ್, ಆಂಧ್ರಪ್ರದೇಶ, ಕೇರಳ ಮತ್ತು ವಿದೇಶದಿಂದ ಡ್ರಗ್ಸ್ ತರಿಸುತ್ತಿದ್ದ ಸುಳಿವು ಸಿಸಿಬಿಗೆ ಲಭ್ಯವಾಗಿತ್ತು. ಇದನ್ನು ಆಧರಿಸಿ ಜಯನಗರ ಆರ್‌ಟಿಒ ಕಚೇರಿ ಎಫ್‌ಡಿಎ ರವಿಶಂಕರ್‌ನನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದಾಗ ರಾಗಿಣಿ ಸಿಂಡಿಕೇಟ್ ಮಾಡಿಕೊಂಡಿದ್ದ ಸುಳಿವು ಲಭ್ಯವಾಗಿದೆ ಎಂದು ಸಿಸಿಬಿ ಅಧಿಕಾರಿಗಳು ಕೋರ್ಟ್‌ಗೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಏಪ್ರಿಲ್ 12ರಂದು ಸೆನೆಗಲ್ ಮೂಲದ ಪೆಡ್ಲರ್ ಲೂಮ್ ಪೆಪ್ಪರ್ ಅಲಿಯಾಸ್ ಸೈಮನ್ ಮತ್ತು ರವಿಶಂಕರ್ ಡ್ರಗ್ಸ್ ಕುರಿತು ವಾಟ್ಸ್‌ಆ್ಯಪ್‌ನಲ್ಲಿ ಕೋಡ್‌ವರ್ಡ್‌ಗಳಲ್ಲಿ ಸಂಭಾಷಣೆ ನಡೆಸಿದ್ದಾರೆ. ಜೂನ್ 23ರಂದು ರವಿಶಂಕರ್ ಮತ್ತು ಪ್ರಶಾಂತ್ ರಾಂಕಾ ನಡುವೆ ಕೋಡ್‌ವರ್ಡ್‌ಗಳಲ್ಲಿ ಚಾಟಿಂಗ್ ಮಾಡಿರುವುದು ಸಹ ಪತ್ತೆಯಾಗಿದೆ. ಆರೋಪಿಗಳ ಮೊಬೈಲ್‌ಗಳನ್ನು ಸೈಬರ್ ಲ್ಯಾಬ್‌ಗೆ ಕಳುಹಿಸಿ ವರದಿ ಪಡೆದಿದ್ದಾರೆ. ಈ ಎಲ್ಲ ಚಾಟ್ ಜೂನ್ 23ರಂದೇ ನಡೆದಿದೆ. ಪೆಡ್ಲರ್‌ಗಳಿಗೆ ಮತ್ತು ಆರೋಪಿಗಳಿಗೆ 6 ತಿಂಗಳ ಹಿಂದೆಯೇ ಸಿಸಿಬಿ ಪೊಲೀಸರು ಬಲೆಬೀಸಿರುವ ವಿಚಾರ ಗೊತ್ತಾಗಿದೆ. ಪೊಲೀಸ್ ಇಲಾಖೆಯಲ್ಲಿಯೇ ಎಚ್ಚರಿಕೆ ಕೊಟ್ಟಿದ್ದರಾ ಎಂಬ ಅನುಮಾನ ಸಹ ವ್ಯಕ್ತವಾಗಿದೆ.

**ರಾಗಿಣಿ ಅಲಿಯಾಸ್ ಗಿಣಿ, ರಾಗ್ಸ್:** ಆರೋಪಿ ನಟಿ ರಾಗಿಣಿಯನ್ನು ಪೆಡ್ಲರ್‌ಗಳು ಗಿಣಿ ಅಲಿಯಾಸ್ ರಾಗ್ಸ್ ಎಂದು ಕರೆಯುತ್ತಿದ್ದರು. ರಾಗಿಣಿ ಮನೆಯಲ್ಲಿ 3 ದುಬಾರಿ ಬೆಲೆಯ ಮೊಬೈಲ್, 2 ಪೆನ್‌ಡ್ರೈವ್, ಆರ್ಗಾನಿಕ್ ಸ್ಮೋಕ್ ಮೆಂಥಲ್, 6 ಸಿಗರೇಟ್ ಪತ್ತೆಯಾಗಿವೆ.

## ಆರೋಪಿಗಳ ನಡುವಿನ ಸಂಭಾಷಣೆ

**ಪ್ರಶಾಂತ್ ರಾಂಕಾ: ಪೆಡ್ಲರ್‌ಗಳಿಗೆ ಕರೆ ಮಾಡಬೇಡ.**

**ರವಿಶಂಕರ್: ಇಲ್ಲ ತುಂಬಾ ಸಮಯದಿಂದ ಕರೆ ಮಾಡಿಲ್ಲ**

**ಪ್ರಶಾಂತ್ ರಾಂಕಾ: ಬಹುದೊಡ್ಡ ಪ್ರಮಾಣದಲ್ಲಿ ಹುಡುಕಾಟ ನಡೆಯುತ್ತಿದೆ.**

**ರವಿಶಂಕರ್: ಏನಾಯಿತು ?**

**ಪ್ರಶಾಂತ್ ರಾಂಕಾ: ಸಂದೀಪ್ ಪಾಟೀಲ್ ಸರ್..**

**ರವಿಶಂಕರ್: ಇದೆಲ್ಲ ಹೇಗಾಯಿತು ?**

**ಪ್ರಶಾಂತ್ ರಾಂಕಾ: ಬಾತ್ಮೀದಾರರಿಂದ ನನ್ನೆ ಗೊತ್ತಾಯಿತು**

**ರವಿಶಂಕರ್: ಬಹಳ ಧನ್ಯವಾದ..**

**ಪ್ರಶಾಂತ್ ರಾಂಕಾ: ಹುಷಾರಾಗಿರು.**